ಪಿ.ಡಬ್ಲ್ಯೂ-01

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ- ಶ್ರೀಮತಿ ಎಸ್ ಎಲ್ ಎ ವಕೀಲರಿಂದ ದೂರುದಾರರ ಪರವಾಗಿ

8. ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಆರೋಪಿ ಸಹಿಯಿನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಬ್ಯಾಂಕಿನ ಹಿಂಬರಹಗಳನ್ನು ನಿಪಿ- 2 ಮತ್ತು 3 ಎಂದು ಗುರುತಿಸಲಾಯಿತು. ವಕೀಲರ ಮೂಲಕ ನೀಡಿದ ಕಾನೂನು ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ನಿಪಿ 4 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಸಹಕಾರ ಸಂಘದವರು ನನಗೆ ನೀಡಿರುವ ಅಧಿಕಾರ ಪತ್ರವನ್ನು ನಿಪಿ 6 ಎಂದು ಗುರುತಿಸಲಾಯಿತು. ನೋಂದಣಿ ಪತ್ರದ ದೃಢೀಕೃತ ನಕಲನ್ನು ನಿಪಿ-7 ಎಂದು, ನೇಮಕಾತಿ ಪತ್ರದ ದೃಢೀಕೃತ ನಕಲನ್ನು ನಿಪಿ-8 ಎಂದು. ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಲದ ಅರ್ಜಿಯನ್ನು ನಿಪಿ 10 ಎಂದು ಗುರುತಿಸಲಾಯಿತು. ಸಾಲ ಮಂಜೂರಾತಿ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ವಾಹನದ ಬಿ ಎಕ್ಸ್ಟ್ರಾಕ್ಟ್ನ್ನು ಹಾಜರುಪಡಿಸಿದ್ದು ನಿಪಿ-12 ಎಂದು, ಸ್ಟೇಟಮೆಂಟ್ ಆಫ್ ಅಕೌಂಟನ್ನು ಹಾಜರುಪಡಿಸಿದ್ದು ನಿಪಿ 13 ಎಂದು ಗುರುತಿಸಲಾಯಿತು. ಲೋನ್ ಸ್ಟೇಟ್ ಮೆಂಟನ್ನು ನಿಪಿ-14 ಎಂದು, ಕೆನರಾ ಬ್ಯಾಂಕಿನ ಸ್ಟೇಟ್ ಮೆಂಟ್ ಆಫ್ ಅಕೌಂಟನ್ನು ನಿಪಿ-15 ಎಂದು ಗುರುತಿಸಲಾಯಿತು.

ಪಾಟಿ ಸವಾಲಿಗೆ ಕಾಲಾವಶಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ